ದಿನಾಂಕ: 12.07.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಕೆ ಆರ್ ಡಿ ವಕೀಲರಿಂದಃ**

ನಾನು ನನ್ನ ಗಂಡ ಬೆಂಗಳೂರಿನಲ್ಲಿ ವಾಸ ಇದ್ದಾಗ ಅರಶಿನಗುಂಟೆ ಗ್ರಾಮದಲ್ಲಿ ಒಂದು ಸೈಟ್ ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅರಶಿನಗುಂಟೆ ಗ್ರಾಮದಲ್ಲಿರುವ ಸೈಟ್ ನಿಮ್ಮ ಮತ್ತು ನಿಮ್ಮ ಗಂಡನ ಮದ್ಯೆ ಭಿನ್ನಾಭಿಪ್ರಾಯ ಆಗುವ ಮುಂಚೆ ತೆಗೆದುಕೊಂಡ ಸೈಟೋ ಅಥವಾ ನಂತರ ತೆಗೆದುಕೊಂಡ ಸೈಟೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆ ಬಗ್ಗೆ ತನಗೆ ಗೊತ್ತಿಲ್ಲ ನನಗೆ ಹೇಳಿಲ್ಲ ಎಂದು ನುಡಿಯುತ್ತಾರೆ. ಅರಶಿನಗುಂಟೆ ಗ್ರಾಮದಲ್ಲಿ ಸೈಟ್ ತೆಗೆದುಕೊಳ್ಳುವ ಸಮಯದಲ್ಲಿ ನನ್ನ ಮಾವ ಮನೆಗೆ ಬಂದು ರೂ.26 ಸಾವಿರ ನನ್ನ ಕೈಗೆ ನೀಡಿದ್ದಾರೆ ಎಂದರೆ ಸರಿಯಲ್ಲ. 1996 ರಲ್ಲಿ ನನ್ನ ಮಾವ ನನಗೆ ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ.

ಬೀರೆನಹಳ್ಳಿಯಲ್ಲಿ ಬರಗಾಲ ಬಂದು ಕಷ್ಟ ಇತ್ತು ಎನ್ನುವ ವಿಚಾರ ನನಗೆ ಗೊತ್ತಿತ್ತು. ದಾವಾ ಐಟಂ ನಂ.2 ಬೀರೇನಹಳ್ಳಿಯಲ್ಲಿದೆ ಎಂದರೆ ನಿಜ. ಅದರಲ್ಲಿ ಬೋರ್ವೆಲ್ ಇದ್ದು ನೀರಾವರಿ ಜಮೀನು ಎಂದರೆ ನಿಜ. 1995-96 ರಿಂದ ಅದು ಬೋರ್ ನೀರಿನ ನೀರಾವರಿ ಜಮೀನು ಎಂದರೆ ಸಾಕ್ಷಿ ನಾವು ಮದುವೆಯಾದಾಗ ನೀರವರಿ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ನನ್ನ ಮಾವ ಸುಮಾರು 5 ಬೋರ್ ಹಾಕಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಒಂದೇ ಬೋರ್ ವೆಲ್ ಎಂದು ಹೇಳುತ್ತಾರೆ. ಒಂದು ಬೋರ್ ವೆಲ್ ಹಾಕಿಸಲು 1 ರಿಂದ 1 ½ ಲಕ್ಷ ಖರ್ಚು ಇದೆ ಎಂದರೆ ಸಾಕ್ಷಿ ಹಿಂದೆ ಕಮ್ಮಿ ಇತ್ತು ಎಂದು ಹೇಳುತ್ತಾರೆ. ಇತ್ತೀಚೆಗೆ ಹಣ ಖರ್ಚು ಮಾಡಿ ಬೋರ್ ವೆಲ್ ಹಾಕಿದ್ದಾರೆ ಎಂದರೆ ಸರಿಯಲ್ಲ.

ನನ್ನ ಮಾವನಿಗೆ 4 ಜನ ಹೆಣ್ಣು ಮಕ್ಕಳು, ಮೊಮ್ಮಕ್ಕಳು ಇದ್ದು ಅವರೆಲ್ಲರೂ ಬಂದು ಹೋದಾಗ ನನ್ನ ಮಾವನೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೊಂದಿಗೆ ನಾವು ಸಹ ನೋಡಿಕೊಳ್ಳುತ್ತಿದ್ದೆವು ಎಂದು ನುಡಿಯುತ್ತಾರೆ. ನನ್ನ ಮಾವ ಮೃತ

ಪಡುವ 1 ವರ್ಷಗಳ ಮುಂಚೆ ಎಲ್ಲರನ್ನು ಕರೆಸಿ ಪಂಚಾಯತಿ ಮಾಡಿ ಎಷ್ಟು ಸಾಲ ಇದೆ, ಎಷ್ಟು ಜಮೀನು ಇದೆ ಎನ್ನುವ ಬಗ್ಗೆ ಮಾತನಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಾವ ಆಸ್ತಿ ಅಭಿವೃದ್ಧಿ ಪಡಿಸುವ ಸಲುವಾಗ ದಾವಾ ಐಟಂ ನಂ.1 ರಲ್ಲಿ 12 ಎಕರೆ 30 ಗುಂಟೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ವಿಚಾರ ಎಲ್ಲಾ ನನಗೆ ಗೊತ್ತಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಲಿ ಇರುವ ಆಸ್ತಿಯಲ್ಲಿ ನನ್ನ ಗಂಡ ಮಕ್ಕಳಿಗೆ ಪಾಲು ಕೊಡಲು ಸಿದ್ಧನಿದ್ದಾನೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಎಂದಿಗೂ ತಮಗೆ ಭಾಗ ಬೇಕು ಎಂದು ಕೇಳಿಲ್ಲ, ನನ್ನ ಪ್ರಚೋದನೆ ಮೇರೆಗೆ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಈಗ ವಯಸ್ಕರಾಗಿದ್ದರೂ ಸಹ ಅವರನ್ನು ನ್ಯಾಯಾಲಯಕ್ಕೆ ಕರೆಸದೇ ನಾನು ಅವರ ಪರವಾಗಿ ಹಾಜರಾಗುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರಕಾಶ್ ರವರು ಈ ನ್ಯಾಯಾಲಯದಲ್ಲಿ ಓಎಸ್ ನಂ.10/2015 ಎಂಬ ದಾವೆ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ತಿಪ್ಪೇಸ್ವಾಮಿ, ನನ್ನ ಗಂಡನ ತಮ್ಮ ಪ್ರಕಾಶ್ ಮತ್ತು ಅಕ್ಕ ತಂಗಿಯರು ಸೇರಿ ಆ ದಾವೆಯಲ್ಲಿ ರಾಜಿ ಮಾಡಿಕೊಂಡು ರಾಜಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ.

**8 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು